ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ

ದಿನಾಂಕಃ 01.04.2026

ಮುಂದುವರೆದ ಮುಖ್ಯ ವಿಚಾರಣೆಃ 3 ಮತ್ತು 4 ನೆ ಪ್ರತಿವಾದಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

1. 3 ಮತ್ತು 4 ನೆ ಪ್ರತಿವಾದಿಯು ಮರಣ ಶಾಸನ ಪತ್ರದ ಸಾಕ್ಷಿದಾರಾರ ಕಡೆಯಿಂದ ಅಸಲು ನೊಂದಾಯಿತ ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದು ಅದರ ದೃಡೀಕೃತ ನಕಲು ಈಗಾಗಲೆ ನಿಡಿ 14 ಎಂದು ಗುರುತಿಸಲಾಗಿರುತ್ತದೆ. ಈಗ ಅಸಲು ದಾಖಲಾತಿಯನ್ನು ನಿಡಿ 50 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿ 50 ರಲ್ಲಿರುವ ಇನ್ನೊಬ್ಬ ಸಾಕ್ಷಿ ಶಿವಣ್ಣರವರ ಸಹಿಯನ್ನು ಗುರುತಿಸಿದರು. ಸಾಕ್ಷಿಯು ನಿಡಿ 50 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಾಕ್ಷಿಯ ಸಹಿಯನ್ನು ನಿಡಿ 50ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುರಳಿಧರ್ ಎಂಬ ಸಾಕ್ಷಿಯ ಸಹಿಯನ್ನು ನಿಡಿ 50 ರಲ್ಲಿ ನೋಡಿ ಗುರುತಿಸಿದರು. ಸಾಕ್ಷಿಯು ನಿಡಿ 50 ರಲ್ಲಿ ಪ್ರತಿ ಪುಟದಲ್ಲಿ ಬರೆದುಕೊಟ್ಟವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಡಿ 50ಬಿ ರಿಂದ 50ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿ 50 ರಲ್ಲಿ ಸಹಿ ಹಾಕಿರುವ ಸಾಕ್ಷಿ ಕೆ ಸಿ ಚಂದ್ರ ರವರ ಸಹಿಯನ್ನು ನೋಡಿ ಗುರುತಿಸಿದರು. ಸಾಕ್ಷಿಯು ನಿಡಿ 50 ನ್ನು ಬರೆದಿರುವ ಪತ್ರಬರಹಗಾರರ ಸಹಿಯನ್ನು ನೋಡಿ ಗುರುತಿಸಿದರು. ಸಾಕ್ಷಿಯು ಮುಂದುವರೆದು ಶಿವಣ್ಣ ಮತ್ತು ಮುರಳಿಧರ್ ಇವರು ಜೀವಂತ ಇರುವುದಿಲ್ಲ ಎಂದು ನುಡಿದರು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

1. ನನ್ನ ಹೆಂಡತಿಯ ಹೆಸರು ರೇಣುಕಾ . ಸದರಿ ದಾವೆಯಲ್ಲಿ ಅವರು ಪ್ರತಿವಾದಿಯಾಗಿರುತ್ತಾರೆಎಂದರೆಸರಿ. ಕೆ ಕೆ ಸೋಮಣ್ಣ ಮತ್ತು ನಾನು ಚಿಕ್ಕ ವಯಸ್ಸಿನಿಂದ ಪರಿಚಯ . ಕರಿಶೆಟ್ಟರ್ ರವರಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಕರಿಶೆಟ್ಟರ್ ರವರ ಮಜನೆ ವಿಚಾರ ನನಗೆ ಮೊದಲಿನಿಂದಲೂ ಗೊತ್ತು ಎಂದರೆ ಸರಿ . ಅವರ ಜಮೀನುಗಳು ಎಲ್ಲಿ ಎಲ್ಲಿ ಇವೆ ಎಂದು ನನಗೆ ತಿಳಿದಿರುತ್ತದೆ . ದಿಃ 30.07.1985 ರಲ್ಲಿ ಕರಿಶೆಟ್ಟರ್ ರವರು ಅವರ ಮನೆಯಲ್ಲೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ. ಕರಿಶೆಟ್ಟರ್ ರವರ ಮನೆಯಲ್ಲಿ ಟೈಪರೈಟರ ಮಿಶನ್ ಇರುವುದಿಲ್ಲ. ಮರಣ ಶಾಸನ ಪತ್ರವನ್ನು ಟೈಪರೈಟರ ಸಹಾಯದಿಂದ ಟೈಪಿಂಗ್ ಮಾಡಲಾಗಿರುತ್ತದೆ.

2. ನಿಡಿ 50 ರ ಒಕ್ಕಣೆಗಳನ್ನು ಕೆ ಕೆ ಸೊಮಣ್ಣರವರ ನಿರ್ದೇಶನದ ಮೆರೆಗೆ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 50 ರ ಒಕ್ಕಣೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ . ನಿಡಿ 50 ರಲ್ಲಿ ಕರಿಶೆಟ್ಟರ ರವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಎಂದು ಬರೆದಿರುವುದಿಲ್ಲ. ನಿಡಿ 50 ನ್ನು ಸರ್ವೆ ನಂ 52 ರಲ್ಲಿ 8 ಸೆಂಟ್ ಜಾಗಕ್ಕೆ ಮತ್ತು ಸರ್ವೆ ನಂ 57/1 ರಲ್ಲಿ 11 ಸೆಂಟ್ ಜಾಗಕ್ಕೆ ಸಂಬಂದಪಟ್ಟಂತೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ. ನಿಡಿ 50 ರಲ್ಲಿ ನನ್ನ 5 ಜನ ಮಕ್ಕಳಿಗೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 50 ರಲ್ಲಿ ಅವರ ಹೆಣ್ಣು ಮಗಳ ವಿಚಾರವಾಗಿ ಯಾವುದೆ ಒಕ್ಕಣೆಗಳು ಇರುವುದಿಲ್ಲ.

3. ಕರಿಶೆಟ್ಟರ್ ರವರು ಅಸ್ತಮ ಖಾಯಿಲೆಯಿಂದ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ನಿಡಿ 50 ರಲ್ಲಿ ನಾನು ಅಸ್ತಮ ಖಾಯಿಲೆಯಿಂದ ರೋಗಪೀಡಿತವಾಗಿ ಹಾಸಿಗೆ ಹಿಡಿದಿರುತ್ತೇನೆ ಎಂದು ಒಕ್ಕಣೆ ಇರುತ್ತದೆ ಎಂದರೆ ಸರಿಯಲ್ಲ. ಕರಿಶೆಟ್ಟರ್ ರವರರಿಗೆ ಜ್ಞಾಪಕ ಶಕ್ತಿ , ಬರೆಯುವ ಶಕ್ತಿ ಮತ್ತು ಮಾತನಾಡುವ ಶಕ್ತಿ ಯಾವುದು ಇರಲಿಲ್ಲ ಎಂದರೆ ಸರಿಯಲ್ಲ. ಕರಿಶೆಟ್ಟರ್ ರವರಿಗೆ ಅವರು ಯಾವ ವಿಚಾರವಾಗಿ ಯಾವ ದಾಖಲೆ ಬರೆದಿರುತ್ತಾರೆ ಎಂದು ಅವರಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ನಿಡಿ 50 ರಲ್ಲಿ 3 ಪುಟದಲ್ಲಿ ರುವ ಸಹಿಯನ್ನು ಮಾಡಿದವರು ಕರಿಶೆಟ್ಟರ್ ರವರು ಎಂದು ಸಾಕ್ಷಿಯು ನೋಡಿ ಗುರುತಿಸಿದರು. ನಿಡಿ 50 ರಲ್ಲಿರುವ 3 ಪುಟದ ಸಹಿಗಳಲ್ಲಿ ಕರಿಶೆಟ್ಟರ್ ರವರ ಸಹಿಗಳು ವ್ಯತ್ಯಾಸವಿರುತ್ತದೆ ಎಂದರೆ ಸಾಕ್ಷಿಯು ಸಹಿ ಕರಿಶೆಟ್ಟರ್ ರವರದೆ ಎಂದು ನುಡಿದರು .

4. ಕರಿಶೆಟ್ಟರ್ ರವರು ನಿಡಿ 50 ರಲ್ಲಿ 3 ಸಹಿಗಳನ್ನು ಮಾಡಿರುತ್ತಾರೆ. ಕರಿಶೆಟ್ಟರ್ ರವರು ನಿಡಿ 50 ರಲ್ಲಿ ಎರಡು ಕಡೆ ಅವರ ಹೆಬ್ಬಟ್ಟನ್ನು ಹಾಕಿರುತ್ತಾರೆ. ನಿಪಿ 50 ರಲ್ಲಿ ನಿಪಿ 1 ಮತ್ತು 2 ನೆ ಪುಟದಲ್ಲಿ ಒಂದು ದಪ್ಪ ಅಕ್ಷರದಲ್ಲಿ ಇರುತ್ತದೆ ಮತ್ತು ಇನ್ನು ಕೆಲವು ಒಕ್ಕಣೆಗಳು ಸಣ್ಣ ಅಕ್ಷರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಸಣ್ಣ ಅಕ್ಷರದಲ್ಲಿರುವ ಒಕ್ಕಣೆಗೆ ಸ್ಪೇಸ್ ಕಡಿಮೆ ಬಿಟ್ಟಿರುತ್ತಾರೆ ಮತ್ತು ದಪ್ಪ ಅಕ್ಷರದಲ್ಲಿರುವ ಒಕ್ಕಣೆಗೆ ಸ್ಪೇಸ್ ಜಾಸ್ತಿ ಬಿಟ್ಟಿರುತ್ತಾರೆ ಎಂದು ನುಡಿದರು. ನಿಡಿ 50 ರಲ್ಲಿರುವ ಒಂದನೆ ಪುಟದ ಹಿಂಬದಿಯ ಪೆಜನಲ್ಲಿ ಕರಿಶೆಟ್ಟರ್ ರವರ ಹೆಬ್ಬಟ್ಟನ್ನು ಅಡ್ಡ ಹಾಕಿಸಲಾಗಿರುತ್ತದೆ ಮತ್ತು

ಎರಡನೆ ಪುಟದಲ್ಲಿ ಹೆಬ್ಬೆಟ್ಟಿನ ಗುರತನ್ನು ಮೇಲಕ್ಕೆ ತೋರಿಸುವಂತೆ ಹಾಕಿಸಿರುತ್ತಾರೆ. ಸದರಿ ಹೆಬ್ಬೆಟನ ಗುರುತುಗಳನ್ನು ಪತ್ರಬರಹಗಾರರು ಹಾಕಿಸಿರುತ್ತಾರೆ .

5. ಕೆ ಕೆ ಸೋಮಣ್ಣರವರು ನನ್ನ ಜೊತೆ ಶಾಮೀನು ಆಗಿ ಕರಿಶೆಟ್ಟರ್ ರವರ ಹೆಬ್ಬೆಟ್ಟು ಗುರತನ್ನು ಮತ್ತು ಸಹಿಗಳನ್ನು ಅವರಿಗೆ ಅರಿವು ಇಲ್ಲದೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕರಿಶೆಟ್ಟರ್ ರವರು ಪ್ರಜ್ಞಾ ಹೀನಾ ಸ್ಥಿತಿಯಲ್ಲಿದ್ದರು ಮತ್ತು ಅವರಿಗೆ ನಿಡಿ 50 ರ ಬಗ್ಗೆ ಯಾವುದೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಕರಿಶೆಟ್ಟರ್ ರವರಿಗೆ ನಿಡಿ 50 ರ ವಿಚಾರ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಕೆ ಕೆ ಸೊಮಣ್ಣರವರು ಖಾಲಿ ಇದ್ದ ಜಾಗಕ್ಕೆ ಅಡ್ಜಸ್ಟಮೆಂಟ್ ಮಾಡಿ ಚಿಕ್ಕ ಅಕ್ಷರಗಳನ್ನು ಆ ಜಾಗಕ್ಕೆ ತಕ್ಕಂತೆ ಸೇಸಿದ್ದೇವೆ ಎಂದರೆ ಸರಿಯಲ್ಲ. ದಾವಾಶೆಡ್ಯೂಲ್ 2 ನೆ ಸ್ವತ್ತನ್ನು ಕೆ ಕೆ ಸೊಮಣ್ಣ ರವರ ಹೆಂಡತಿಯಿಂದ ಖರೀದಿ ಮಾಡಿರುತ್ತೇನೆ . ನಾನು ಕೆ ಕೆ ಸೋಮಣ್ಣರವರು ಶರೀಖಾಗಿ ಸದರಿ ದಾವೆಯಲ್ಲಿ ಮರಣ ಶಾಸನ ಪತ್ರವನ್ನು ಬರೆದಿದ್ದೇವೆ ಎಂದರೆ ಸರಿಯಲ್ಲ. ನಾನು ಮರಣ ಶಾಸನ ಪತ್ರವನ್ನು ಬರೆಯುವಾಗ ಇರಲಿಲ್ಲ , ನಾನು ಮತ್ತು ಕೆ ಕೆ ಸೋಮಣ್ಣರವರು ಸೃಷ್ಟಿಸಿಕೊಂಡು ಮರಣ ಶಾಸನ ಪತ್ರಕ್ಕೆ ನಂತರ ದಿನಗಳಲ್ಲಿ ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 50 ರಲ್ಲಿ 2 ನೆ ಪುಟದಲ್ಲಿ ನಾನು ಅಡ್ಜಸ್ಟಮೆಂಟ್ ಮಾಡಿಕೊಂಡು ಜಾಗಕ್ಕೆ ಸರಿ ಹೊಂದುವ ಹಾಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 50 ನ್ನು ಬರರೆಯುವಾಗ ಕರಿಶೆಟ್ಟರ್ ರವರಿಗೆ ಅಂದಾಜು 70 ವರುಷ ವಯಸ್ಸಾಗಿರುತ್ತದೆ .

**ಮರು ವಿಚಾರಣೆ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.